ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


"ವಾರ್ತಾ ಭವನ", ಡಿ.ಸಿ.ಕಂಪೌಂಡ, ಧಾರವಾಡ-580001. ( 0836-2447469)

ಇ-ಮೇಲ್:- varthabhavandwd74@gmail.com


ದಿನಾಂಕ: 28-12-2018

ವಾವಿಸಂ:759

# ಅ.ಭಾ.84 ನೇ ಕನ್ನಡ ಸಾಹಿತ್ಯ ಸಮ್ಮೇಳನ

# ಜಿಲ್ಲೆಯಾದ್ಯಂತ ಹಬ್ಬದ ವಾತಾವರಣ ನಿರ್ಮಿಸಲು ನಿರ್ಧಾರ

**ಧಾರವಾಡ ( ಕರ್ನಾಟಕ ವಾರ್ತೆ) ಡಿ.28:** ಹುಬ್ಬಳ್ಳಿ ಧಾರವಾಡ ಅವಳಿನಗರ ಹಾಗೂ ಜಿಲ್ಲೆಯಾದ್ಯಂತ ಕನ್ನಡದ ಹಬ್ಬದ ವಾತಾವರಣ ನಿರ್ಮಿಸಿ ಬರುವ ಜನವರಿ 4,5 ಹಾಗೂ 6 ರಂದು ನಡೆಯಲಿರುವ ಅ.ಭಾ.84 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು.ಮುದ್ರಣ,ದೃಶ್ಯ ಹಾಗೂ ಸಾಮಾಜಿಕ ಜಾಲತಾಣಗಳ ಮಾಧ್ಯಮಗಳ ಮೂಲಕ ಜನರನ್ನು ಈ ನುಡಿಹಬ್ಬಕ್ಕೆ ಅಣಿಗೊಳಿಸಲು ವ್ಯಾಪಕ ಚಟುವಟಿಕೆಗಳನ್ನು ಕೈಗೊಳ್ಳಲು ಸಮ್ಮೇಳನ ಪ್ರಚಾರ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಇಲ್ಲಿನ ಕನ್ನಡ ಸಾಹಿತ್ಯ ಭವನದಲ್ಲಿ ನಡೆದ ಸಮಿತಿ ಸಭೆಯ ಅಧ್ಯಕ್ಷತೆವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಲಿಂಗರಾಜ ಅಂಗಡಿ ಮಾತನಾಡಿ, ಸಾಂಸ್ಕೃತಿಕ ನಗರಿ,ವಿದ್ಯಾಕಾಶಿ ಎಂಬ ಖ್ಯಾತಿ ಹೊಂದಿರುವ ಧಾರವಾಡದಲ್ಲಿ ಸಮ್ಮೇಳನ ನಡೆಯುತ್ತಿರುವದಕ್ಕೆ ಜಿಲ್ಲೆಯಷ್ಟೇ ಅಲ್ಲದೇ ನೆರೆ ಹೊರೆಯ ಜಿಲ್ಲೆಗಳಲ್ಲಿಯೂ ವ್ಯಾಪಕ ನಿರೀಕ್ಷೆ ಇದೆ.ಅದಕ್ಕೆ ತಕ್ಕಂತೆ ಸಿದ್ಧತೆಗಳೂ ಕೂಡ ನಡೆಯುತ್ತಿವೆ. ಮಾಧ್ಯಮಗಳು ವ್ಯಾಪಕವಾಗಿ ಪ್ರಚಾರ ಮಾಡುತ್ತಿವೆ. ಎಲ್ಲ ಸಮಿತಿಗಳೂ ತಮ್ಮ ಚಟುವಟಿಕೆಗಳ ಕುರಿತು ಸಕಾಲದಲ್ಲಿ ಮಾಧ್ಯಮಗಳಿಗೆ ಅಥವಾ ಪ್ರಚಾರ ಸಮಿತಿಗೆ ಮಾಹಿತಿ ನೀಡಬೇಕು. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಜನಪದ ಕಲೆಗಳ ಮೂಲಕ ಪ್ರಚಾರ ಕೈಗೊಳ್ಳಲು ಕಸಾಪದ ತಾಲ್ಲೂಕು ಹಾಗೂ ಹೋಬಳಿ ಘಟಕಗಳಿಗೆ ಸೂಚಿಸಲಾಗಿದೆ ಎಂದರು.

ಸಮಿತಿಯ ಕಾರ್ಯಾಧ್ಯಕ್ಷ, ಜಿಲ್ಲಾ ವಾರ್ತಾಧಿಕಾರಿ ಮಂಜುನಾಥ.ಡಿ.ಡೊಳ್ಳಿನ ಮಾತನಾಡಿ, ಸಮ್ಮೇಳನದ ಹಿನ್ನೆಲೆಯಲ್ಲಿ ನಿರ್ಮಿಸಲಾಗುತ್ತಿರುವ ಮಾಧ್ಯಮ ಕೇಂದ್ರ, ಅಲಂಕಾರ ಸಮಿತಿಯಿಂದ ಕೈಗೊಳ್ಳಲಾಗುತ್ತಿರುವ ಚಟುವಟಿಕೆಗಳು, ಧಾರವಾಡದ ಪಾರಂಪರಿಕ ಪ್ರದೇಶಗಳಿಗೆ ಸ್ಥಳೀಯ ಜನರೊಂದಿಗೆ ಭೇಟಿ ನೀಡುವ ಪಾರಂಪರಿಕ ನಡಿಗೆ ಕಾರ್ಯಕ್ರಮದ ಕುರಿತು ತಿಳಿಸಿದರು.

ಸದಸ್ಯರಾದ ಸಿ.ಯು.ಬೆಳ್ಳಕ್ಕಿ, ಪ್ರೊ. ಮೋಹನ ಸಿದ್ಧಾಂತಿ, ಪ್ರೊ.ಶಿವಾನಂದ ಶೆಟ್ಟರ್, ಗುರು ಹಿರೇಮಠ, ಲಕ್ಷ್ಮಣ ಬಕ್ಕಾಯಿ, ಡಾ.ವಿಶ್ವನಾಥ ಚಿಂತಾಮಣಿ, ಶಿವಾನಂದ ಭಾವಿಕಟ್ಟಿ, ದೇವಾನಂದ ರತ್ನಾಕರ್, ಎನ್.ಆರ್.ಬಾಳಿಕಾಯಿ, ಒಟಿಲಿ ಅನ್ಬನ್‌ಕುಮಾರ್, ಪತ್ರಕರ್ತರಾದ ಬಸವರಾಜ ಹಿರೇಮಠ, ಪತ್ರಿಕಾ ಛಾಯಾಗ್ರಾಹಕ ಬಿ.ಎಂ.ಕೇದಾರನಾಥ ಮತ್ತಿತರರು ಮಾತನಾಡಿ ತಮ್ಮ ಸಲಹೆಗಳನ್ನು ನೀಡಿದರು.

ಧಾರವಾಡದ ವಿಜೇತ್ ಹೊಸಮತ ಹಾಗೂ ಬೆಂಗಳೂರಿನ ಆಕರ್ಷ್ ಅವರು ಸಮ್ಮೇಳನಕ್ಕೆ ಸಿದ್ಧಪಡಿಸುತ್ತಿರುವ ವಿಡಿಯೋ ತುಣುಕುಗಳನ್ನು ಪ್ರದರ್ಶಿಸಿ, ಸಮಿತಿ ಸದಸ್ಯರ ಸಲಹೆ ಪಡೆದರು. ಡಾ.ರಾಮು ಮೂಲಗಿ ಜನಪದ ಶೈಲಿಯಲ್ಲಿ ರಚಿಸಿರುವ ಸಮ್ಮೇಳನ ಕುರಿತ ಗೀತೆಗಳನ್ನು ಪ್ರಸ್ತುತಪಡಿಸಿದರು.

ರಾಷ್ಟ್ರೀಯ ಮಾಹಿತಿ ಕೇಂದ್ರದ ಜಿಲ್ಲಾ ಅಧಿಕಾರಿ ಎಂ.ಮೀನಾಕುಮಾರಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಕೆ .ಎಸ್.ಕೌಜಲಗಿ, ಕೋಶಾಧ್ಯಕ್ಷ ಎಸ್.ಎಸ್.ದೊಡ್ಡಮನಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ ಭಜಂತ್ರಿ, ವಾರ್ತಾ ಸಹಾಯಕ ಡಾ.ಸುರೇಶ ಹಿರೇಮಠ, ಡಾ.ಎಸ್.ಬಿ.ಬಸೆಟ್ಟಿ, ಶೇಖರ್ ಎನ್.ಕವಳಿ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

(ಫೋಟೋ ಇವೆ)

---